## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಸ್ಥಳೀಯ ಸಂಸ್ಥೆ ನೌಕರರ ಪಿಂಚಣಿಯನ್ನು ಪಾವತಿಸುವ ದಿನಾಂಕವನ್ನು ಮಾರ್ಪಡಿಸುವ ಬಗ್ಗೆ.

**ಓದಲಾಗಿದೆ:-**

1. ಸರ್ಕಾರದ ಆದೇಶ ಸಂ: ಆಇ 8 ಟಿಟಿಸಿ 84, ದಿನಾಂಕ:26.03.1986.
2. ಖಜಾನೆ ಆಯುಕ್ತರ ಪತ್ರ ಸಂ:ಖ-2/ಸ್ಥ.ಸಂ.ಪಿಂ/27/2020-21, ದಿನಾಂಕ:17.05.2022.

**ಪ್ರಸ್ತಾವನೆ:-**

ಕರ್ನಾಟಕ ಖಜಾನೆ ಸಂಹಿತೆ ಅನುಚ್ಛೇದ 176 ರಲ್ಲಿ ನಿಯಮದಲ್ಲಿ **ತಿಂಗಳ ಮೊದಲ ದಿನಾಂಕದಂದು ಅಥವಾ ನಂತರ ಪಿಂಚಣಿಯನ್ನು ಬಟವಾಡೆ ಮಾಡತಕ್ಕದ್ದೆಂದು ಹಾಗೂ ಅನುಚ್ಛೇದ 177 ರಲ್ಲಿ ಸರಕಾರವು, ಈ ಅನುಚ್ಛೇದದಲ್ಲಿ ಉಲ್ಲೇಖಿಸಿದ ಷರತ್ತುಗಳನ್ನು ಕೆಲವು ಸಂದರ್ಭಗಳಲ್ಲಿ ಸಡಲಿಸಬಹುದು"** ಎಂದು ಹೇಳಲಾಗಿದೆ.

ಮೇಲೆ (1) ರಲ್ಲಿ ಓದಲಾದ ಆದೇಶದಲ್ಲಿ ಸಾರ್ವಜನಿಕ ಬ್ಯಾಂಕುಗಳ ಮೂಲಕ ನಿವೃತ್ತಿ ವೇತನ ಸಂದಾಯ ಮಾಡುವ ಪದ್ಧತಿಯನ್ನು ಜಾರಿಗೆ ತರಲಾಗಿದೆ. ಈ ಪದ್ಧತಿಯನ್ವಯ ನಿವೃತ್ತಿ ವೇತನದಾರರು / ಪಿಂಚಣಿದಾರರು ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳಲ್ಲಿ ಪಿಂಚಣಿಯನ್ನು ಪಡೆಯಲು ತಮ್ಮ ಅಭಿಮತವನ್ನು ಸಲ್ಲಿಸಿದಲ್ಲಿ ಅವರಿಗೆ ಸಂಬಂಧಿಸಿದ ಪಿಂಚಣಿ ಆದೇಶವನ್ನು ಸಂಬಂಧಿಸಿದ ಬ್ಯಾಂಕುಗಳಿಗೆ ಪಿಂಚಣಿ ಪಾವತಿಗಾಗಿ ಕಳುಹಿಸಲಾಗುತ್ತಿದೆ.

ಮೇಲೆ (2) ರಲ್ಲಿ ಓದಲಾದ ಖಜಾನೆ ಆಯುಕ್ತರ ಪತ್ರದಲ್ಲಿ ರಾಜ್ಯ ಸಿವಿಲ್ ಪಿಂಚಣಿಗಳನ್ನು ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕ ಪಾವತಿಸಲಾಗುತ್ತಿದ್ದು, ಪ್ರತಿ ಮಾಹೆ 25 ನೇ ತಾರೀಖಿಗೆ ಪಿಂಚಣಿದಾರರ ಖಾತೆಗೆ ಪಿಂಚಣಿಯನ್ನು ಜಮೆ ಮಾಡಲಾಗುತ್ತಿರುವುದಾಗಿ, ಆದರೆ ಮುನಿಸಿಪಲ್ ಪಿಂಚಣಿಗಳನ್ನು ಖಜಾನೆ ಮುಖಾಂತರ ಪಾವತಿ ಮಾಡುತ್ತಿರುವುದರಿಂದ ಕರ್ನಾಟಕ ಖಜಾನೆ ಸಂಹಿತೆ ಅನುಚ್ಛೇದ 177 ರ ನಿಯಮಾವಳಿ ಪ್ರಕಾರ ಪ್ರತಿ ಮಾಹೆಯ ಕೊನೆಯ ದಿನಾಂಕದಂದು ಪಿಂಚಣಿಗಳನ್ನು ಪಾವತಿ ಮಾಡಲಾಗುತ್ತಿರುತ್ತದೆ. ಸ್ಥಳೀಯ ಸಂಸ್ಥೆಗಳ ಪಿಂಚಣಿದಾರರ ಹಿತ ದೃಷ್ಟಿಯಿಂದ ಹಾಗೂ ಎಲ್ಲಾ ಪಿಂಚಣಿದಾರರಿಗೆ ಏಕರೂಪವಾಗಿ ಪ್ರತಿ ಮಾಹೆಯ 25 ನೇ ತಾರೀಖಿಗೆ ಪಿಂಚಣಿ ಪಾವತಿ ಮಾಡುವುದು ಸಾಧುವಾದ ಕ್ರಮವಾಗಿರುವುದರಿಂದ ಈ ಸಂಬಂಧ ಸರ್ಕಾರದ ಹಂತದಲ್ಲಿ ಕಖಸಂ ಅನುಚ್ಛೇದ

177 ಗೆ ಅಗತ್ಯ ತಿದ್ದುಪಡಿ ಮಾಡುವ ಅವಶ್ಯಕತೆ ಇರುವುದರಿಂದ ಸ್ಥಳೀಯ ಸಂಸ್ಥೆಗಳ ಪಿಂಚಣಿದಾರರ ಪಿಂಚಣಿಯನ್ನು ರಾಜ್ಯ ಸಿವಿಲ್ ಪಿಂಚಣಿದಾರರ ಪಿಂಚಣಿಯಂತೆ ಪ್ರತಿ ಮಾಹೆ 25 ನೇ ತಾರೀಖಿಗೆ ಪಾವತಿಸಲು ಅನುಮತಿ ನೀಡುವಂತೆ ಹಾಗೂ ಕ.ಖ.ಸಂ ಅನುಚ್ಛೇದ 177 ಗೆ ಅಗತ್ಯ ತಿದ್ದುಪಡಿ ಮಾಡಲು ಸರ್ಕಾರವನ್ನು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂ: ಆಇ-ಪಿಇಎನ್/258/2022, ಬೆಂಗಳೂರು,**
**ದಿನಾಂಕ: 20.10.2022**

ಕರ್ನಾಟಕ ಖಜಾನೆ ಸಂಹಿತೆ ಅನುಚ್ಛೇಧ 177 ರ ಅವಕಾಶದಂತೆ ನಿಯಮಗಳನ್ನು ಸಡಿಲಿಸಿ ಸ್ಥಳೀಯ ಸಂಸ್ಥೆಗಳ ಪಿಂಚಣಿದಾರರ ಪಿಂಚಣಿಯನ್ನು ಪ್ರತಿ ಮಾಹೆ 25 ನೇ ದಿನಾಂಕದಂದು ಖಜಾನೆ-2 ರ ಮುಖಾಂತರ ಪಾವತಿಸಲು ಆದೇಶಿಸಲಾಗಿದೆ.

ರಾಜ್ಯ ಸಿವಿಲ್ ಪಿಂಚಣಿದಾರರ ಮತ್ತು ಸ್ಥಳೀಯ ಸಂಸ್ಥೆಗಳ ಪಿಂಚಣಿದಾರರ ಪಿಂಚಣಿಗಳನ್ನು ಪ್ರತಿ ಮಾಹೆ 25 ನೇ ದಿನಾಂಕದಂದು ಪಾವತಿಸುವ ಬಗ್ಗೆ ಕರ್ನಾಟಕ ಖಜಾನೆ ಸಂಹಿತೆ ಅನುಚ್ಛೇಧ 177 ಗೆ ಸೂಕ್ತ ತಿದ್ದುಪಡಿಯನ್ನು ತರಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Venkatesh
**(ವೆಂಕಟೇಶ್ ಎಸ್.ಎನ್.)**
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಿಶ್ರಾಂತಿ ವೇತನ ಮತ್ತು
ಆರ್ಥಿಕ ಆಯೋಗ ಕೋಶ).
20/10/2022

**ಪ್ರತಿಗಳು:-**

1. ಪ್ರಧಾನ ಮಹಾಲೇಖಪಾಲರು, ಲೆಕ್ಕಪತ್ರಗಳು ಮತ್ತು ಹಕ್ಕುಗಳು, ಕರ್ನಾಟಕ, ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5326/5369 ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು(ಲೆಕ್ಕ ತನಿಖೆ-1), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು(ಪಿಂಚಣಿ ಶಾಖೆ), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
4. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ವಿಧಾನಸೌಧ, ಬೆಂಗಳೂರು.

5. ಆಯುಕ್ತರು, ಖಜಾನೆ ಆಯುಕ್ತಾಲಯ, 6ನೇ ಮಹಡಿ, ಕೆ.ಪಿ.ಸಿ.ಎಲ್. ಗ್ರೀನ್ ಬಿಲ್ಡಿಂಗ್, ಔಷಧ ನಿಯಂತ್ರಣ ಕಛೇರಿ ಕಟ್ಟಡದ ಆವರಣ, ಅರಮನೆ ರಸ್ತೆ, ಬೆಂಗಳೂರು-560 001.
6. ಹೆಚ್ಚುವರಿ ನಿರ್ದೇಶಕರು, ಟಿಎನ್‌ಎಂಸಿ, 5 ನೇ ಮಹಡಿ, ಕೆ.ಪಿ.ಸಿ.ಎಲ್. ಗ್ರೀನ್ ಬಿಲ್ಡಿಂಗ್, ಔಷಧ ನಿಯಂತ್ರಣ ಕಛೇರಿ ಕಟ್ಟಡದ ಆವರಣ, ಅರಮನೆ ರಸ್ತೆ, ಬೆಂಗಳೂರು-560 001.
7. ಆಯುಕ್ತರು, ಪೌರಾಡಳಿತ ಇಲಾಖೆ, 9 ನೇ ಮಹಡಿ ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು.
8. ನಿರ್ದೇಶಕರು, ಪಿಂಚಣಿ, ಸಣ್ಣ ಉಳಿತಾಯ, ಆಸ್ತಿ ಋಣ ನಿರ್ವಹಣೆ ನಿರ್ದೇಶನಾಲಯ, ಪೋಡಿಯಂ ಬ್ಲಾಕ್, ವಿ.ವಿ.ಕೇಂದ್ರ, ಬೆಂಗಳೂರು.
9. ಎಲ್ಲಾ ಪಿಂಚಣಿ ಪಾವತಿ ಬ್ಯಾಂಕುಗಳಿಗೆ-ಎಲ್ಲಾ ಜಿಲ್ಲಾ ಖಜಾನೆಗಳ ಮುಖಾಂತರ.
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.